# ಕರ್ನಾಟಕ ಸರ್ಕಾರ

## ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003.

ಅಧಿಸೂಚಿಷನೆ ಸಂಖ್ಯೆ ಸಿ.ಸಿಆರ್.13.ಪಾ.ಚೀ/07-08 ದಿನಾಂಕ 28- 07-2007

[redacted]

ಕರ್ನಾಟಕ ಅರಣ್ಯ ಇಲಾಖೆಯ 2007-08ರ ಅರಣ್ಯ ನರ್ಸರಿ ಋತುವಿಗೆ 01-04-2007 ರಿಂದ 31-03-2008 ರ ಮಧ್ಯದ ಅವಧಿಯಲ್ಲಿ ವಿವಿಧ ಅಳತೆಯ ಪಾಲಿಥಿನ್ ಚೀಲಗಳನ್ನು ಹಾಳೆಗಳನ್ನು ಮತ್ತು ನೇಯ್ದ ಚೀಲಗಳನ್ನು ಸರಬರಾಜು ಮಾಡಲು ಭರವಸೆ ಹೊಂದಿದ ಉತ್ಪಾದಕರ ಸಂಭಾವ್ಯ ಪಟ್ಟಿಯನ್ನು ತಯಾರಿಸಲು ಆಸಕ್ತ ಎಲ್‌ಡಿಪಿಇ ಚೀಲ, ಹಾಳೆ ಮತ್ತು ಹೆಚ್‌ಡಿಪಿಇ ನೇಯ್ದ ಚೀಲಗಳ ಉದ್ದಿಮೆ ಘಟಕಗಳ / ಉತ್ಪಾದಕರಿಂದ ಅರ್ಜಿಯನ್ನು ಈ ಕಚೇರಿಯ ಅಧಿಸೂಚನೆ ದಿನಾಂಕ 07-07-2007 ರಲ್ಲಿ ಆಹ್ವಾನಿಸಲಾಯಿತು. ಆದರೆ, ಈ ಪ್ರಕಟಣೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಯಾಗದೇ ಇರುವುದರಿಂದ ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಪರಿಷ್ಕರಿಸಿ ಈ ಕೆಳಕಂಡಂತೆ ಸಂಕ್ಷಿಪ್ತ ಟೆಂಡರ್ ಪ್ರಕಟಣೆಯನ್ನು ಆಸಕ್ತ ಎಲ್‌ಡಿಪಿಇ ಚೀಲ, ಹಾಳೆ ಮತ್ತು ಹೆಚ್‌ಡಿಪಿಇ ನೇಯ್ದ ಚೀಲಗಳ ಉದ್ದಿಮೆ ಘಟಕಗಳ / ಉತ್ಪಾದಕರ ಗಮನವನ್ನು ಈ ಪ್ರಕಟಣೆಯ ಮೂಲಕ ಸೆಳೆಯಲಾಗಿದೆ. ಹೆಚ್ಚಿನ ವಿವರಗಳನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಇವರಿಂದ ಪಡೆಯಬಹುದು ಅಥವಾ ಅರಣ್ಯ ಇಲಾಖೆ ವೆಬ್‌ಸೈಟ್ WWW.Karnatakaforest.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪಾಲಿಥಿನ್ ಚೀಲ / ಹಾಳೆಗಳಿಗೆ ಪ್ರತಿ ಟನ್‌ಗೆ ಮತ್ತು ನೇಯ್ದ ಚೀಲಗಳಿಗೆ ಒಂದು ಸಾವಿರ ಚೀಲಗಳಿಗೆ ಅನ್ವಯಿಸುವ ದರವನ್ನು ಸಂಭಾವ್ಯ ಪಟ್ಟಿಯಲ್ಲಿ ಸೇರ್ಪಡೆಯಾದವರಿಂದ, ತರುವಾಯ ದರ ಟೆಂಡರ್ ಸ್ವೀಕೃತಿಯ ಮೂಲಕ ನಿಷ್ಕರ್ಷಿಸಲಾಗುವುದು, ನಿಷ್ಕರ್ಷಿಸಲಾದ ದರವು ಮಾರ್ಚಿ 2008ರವರೆಗೂ ಚಾಲ್ತಿಯಲ್ಲಿರುತ್ತದೆ. ಯಾವುದೇ ವಿಭಾಗದಿಂದ ಬೇಡಿಕೆ ಪತ್ರ ಸ್ವೀಕೃತಿಯಾದ ಒಂದು ತಿಂಗಳ ಅವಧಿಯೊಳಗೆ ಅನುಮೋದಿತ ಗುಣಮಟ್ಟದ ಸಾಮಗ್ರಿಯನ್ನು ಸರಬರಾಜು ಮಾಡತಕ್ಕದ್ದು. ಆಸಕ್ತಿ ಇರುವ ಸರಬರಾಜುದಾರರು ತಮ್ಮ ಆಸಕ್ತಿಯನ್ನು ದಿನಾಂಕ 10-09-2007 ಅಥವಾ ಅದಕ್ಕಿಂತ ಪೂರ್ವದಲ್ಲಿ ಸಲ್ಲಿಸಬಹುದು. ಪ್ರಸ್ತಾವನೆಗೆ ಸಂಚಕಾರ ಹಣ ಠೇವಣಿಯಾಗಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಹೆಸರಿನಲ್ಲಿ ರೂ. 2,000: ಮೌಲ್ಯದ ಬೆಂಗಳೂರಿನಲ್ಲಿ ನಗದೀಕರಿಸಬಹುದಾದಂತಹ ಡಿ. ಡಿ ಯನ್ನು ಲಗತ್ತಿಸಿರತಕ್ಕದ್ದು. ಮೊಹರು ಮಾಡಿದ ಲಕೋಟೆಗಳನ್ನು ದಿನಾಂಕ 11-09-2007 ರಂದು ಬೆಳಗ್ಗೆ 11 ಗಂಟೆಗೆ ತೆರೆಯಲಾಗುವುದು. ದಿನಾಂಕ 24-09-2007 ರಂದು ಬೆಳಗ್ಗೆ 12 ಗಂಟೆಗೆ ಸಂಭಾವ್ಯ ಪಟ್ಟಿಯ ಸಫಲ ಉತ್ಪಾದಕ ಉದ್ದಿಮೆಗಳ ಪಟ್ಟಿಯನ್ನು ಕಚೇರಿಯಲ್ಲಿ ಪ್ರಕಟಿಸಲಾಗುವುದು. ಸಂಭಾವ್ಯ ಪಟ್ಟಿಯ ಸಫಲ ಉತ್ಪಾದಕ ಉದ್ದಿಮೆಯು ಮಾತ್ರ ದರ ಟೆಂಡರ್ "ದರ ಟೆಂಡರ್ ನಮೂನೆ" ಯನ್ನು ಪಡೆಯಲು ಅರ್ಹರಿರುತ್ತಾರೆ. "ದರ ಟೆಂಡರ್ ನಮೂನೆ" ಯ ಬೆಲೆ ರೂ. 5000; "ದರ ಟೆಂಡರ್ ನಮೂನೆ" ಯನ್ನು ದಿನಾಂಕ 27-09-2007 ರಂದು ಸಂಜೆ 5 ಗಂಟೆಯವರೆಗೆ ವಿತರಿಸಲಾಗುವುದು. ಇಎಂಡಿ ರೂ. 25,000; ದರ ಟೆಂಡರ್ ನಮೂನೆಗಳನ್ನು ದಿನಾಂಕ 29-09-2007 ರಂದು ಮ. 1.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ದರ ಟೆಂಡರ್‌ಗಳನ್ನು ಅದೇ ಸಂಜೆ 3 ಗಂಟೆಗೆ ತೆರೆಯಲಾಗುವುದು. ದಿನಾಂಕ 07-07-2007 ರ ಅಧಿಸೂಚನೆಯಲ್ಲಿ ಪ್ರಕಟಿಸಿದ ಎಲ್ಲಾ ಷರತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳನ್ನು ಈ ಕಚೇರಿಯಿಂದ ಪಡೆಯಬಹುದು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ